ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್: 114

6ನೇ ವರ್ಷ 9ನೇ ಸಂಚಿಕೆ ಕೊಪ್ಪ 25-10-1987 ಭಾನುವಾರ ಬೆಲೆ 50 ಪೈಸೆ

ಕೋವಿ ಲೈಸೆನ್ಸ್ ನವೀಕರಿಸಲು ಸೂಚನೆ

ಚಿಕ್ಕಮಗಳೂರು: ಆಯುಧ ಕಾಯ್ದೆಯ ನಿಯಮಗಳಿಗೆ ಅನುಸಾರವಾಗಿ ತಮ್ಮ ಬಂದೂಕು ಪರವಾನಗಿಗಳನ್ನು ನವೀಕರಿಸಿಕೊಳ್ಳದಿರುವವರು ತಮ್ಮ ಬಂದೂಕುಗಳನ್ನು ಅ. 31ರೊಳಗೆ ಹತ್ತಿರವಿರುವ ಪೋಲೀಸ್ ಠಾಣೆಗೆ ಒಪ್ಪಿಸಿ ನವೀಕರಿಸಿಕೊಳ್ಳಬೇಕು. ತಪ್ಪಿದಲ್ಲಿ ಅಂತಹ ಬಂದೂಕುಗಳನ್ನು ಅಮಾನತ್ ಪಡಿಸಿಕೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶ್ರೀಮತಿ ಅನಿತಾ ಕೌಲ್ ತಿಳಿಸಿದ್ದಾರೆ

31-12-87ಕ್ಕೆ ಅವಧಿ ಮುಗಿಯುವಂತಹ ಎಲ್ಲಾ ಬಂದೂಕು ಪರವಾನಗಿದಾರರು ಡಿಸೆಂಬರ್ 15ರೊಳಗೆ ನಿಗದಿತ ಶುಲ್ಕವನ್ನು ಜಮಾ ಮಾಡಿ ರಶೀದಿ ಮತ್ತು ಬಂದೂಕಿನೊಂದಿಗೆ ನವೀಕರಣದ ಬಗ್ಗೆ ಸಂಬಂಧಪಟ್ಟ ಪರವಾನಗಿ ನೀಡಿಕೆ ಅಧಿಕಾರಿಗಳಿಗೆ ಖುದ್ದಾಗಿ ಅರ್ಜಿಯನ್ನು ಸಲ್ಲಿಸಬೇಕೆಂದಿದ್ದಾರೆ.

'ಜಿಲ್ಲಾ ಪರಿಷತ್ ಅಧಿಕಾರ ಮೊಟಕುಗೊಳಿಸುವ'
ಸುತ್ತೋಲೆ ವಾಪಸಿಗೆ ಅಧ್ಯಕ್ಷರ ಆಗ್ರಹ

ಜಿ. ಪ. ಸದಸ್ಯರಿಗೆ ಗೌರವ ಧನ ಸೇರಿದಂತೆ 18 ಬೇಡಿಕೆ ಸಲ್ಲಿಕೆ

ಕೆಮ್ಮಣ್ಣುಗುಂಡಿ: ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಜಿಲ್ಲಾ ಪರಿಷತ್ ಕಾರ್ಯದರ್ಶಿಗಳಿಗೆ ಈಚೆಗೆ ಕಳಿಸಿರುವ ಸುತ್ತೋಲೆಯನ್ನು ಹಿಂತೆಗೆದುಕೊಂಡು, ಸೂಕ್ತ ಸ್ಪಷ್ಟೀಕರಣ ನೀಡಬೇಕೆಂದು ಜನತಾ ಪಕ್ಷದ ಜಿಲ್ಲಾ ಪರಿಷತ್ ಅಧ್ಯಕ್ಷರುಗಳ ರಾಜ್ಯ ಸಮಾವೇಶ ಸರ್ಕಾರವನ್ನು ಒತ್ತಾಯಿಸಿದೆ.

ರಾಜ್ಯದ ಉನ್ನತಾಧಿಕಾರ ಸಮಿತಿಯ ತೀರ್ಮಾನವನ್ನು ಉಲ್ಲೇಖಿಸಿರುವ ಈ ಸುತ್ತೋಲೆಯಲ್ಲಿ, ಸರ್ಕಾರದಿಂದ ಅಂಗೀಕೃತವಾದ ಜಿ.ಪ. ಬಜೆಟ್‌ನಲ್ಲಿ ಅನುಕೂಲಕ್ಕೆ ತಕ್ಕಂತೆ ಶೇ. 10ರಷ್ಟು ಬದಲಾವಣೆ ಮಾಡುವ ಮೊದಲು ಸಂಬಂಧಪಟ್ಟ ಇಲಾಖಾಧಿಕಾರಿಗಳ ಪೂರ್ವಾನುಮತಿ ಪಡೆದಿರಬೇಕು; ಜಿ. ಪ ವ್ಯಾಪ್ತಿಗೆ ಒಳಪಡಿಸಲ್ಪಟ್ಟ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಸಂಗ ಬಂದಲ್ಲಿ ಅವರ ಮೂಲ ಇಲಾಖಾ ಮುಖ್ಯಾಧಿಕಾರಿಗಳ ಅನುಮತಿ ಪಡೆದುಕೊಳ್ಳಬೇಕು ಎಂಬುವು ಈ ಸುತ್ತೋಲೆಯ ಮುಖ್ಯಾಂಶಗಳು.

ಜಿಲ್ಲಾ ಪರಿಷತ್ ವ್ಯವಸ್ಥೆ ಜಾರಿಗೆ ಬಂದ 8 ತಿಂಗಳ ನಂತರ ಅ. 18ರಂದು ಇಲ್ಲಿ ನಡೆದ ಈ ಸಮಾವೇಶದಲ್ಲಿ, ಜಿ. ಪ. ವಿಧಿವಿಧಾನಗಳಿಗೆ ತದ್ವಿರುದ್ಧ ಮತ್ತು ಅದರ ಉದ್ದೇಶಗಳಿಗೆ ಕೊಡಲಿ ಪೆಟ್ಟು ಕೊಡುವಂಥದು ಎಂದು ಈ ಸುತ್ತೋಲೆಯನ್ನು ಬಣ್ಣಿಸಲಾಯಿತು.

ಗ್ರಾಮ ಸ್ವರಾಜ್ಯದ ಕಲ್ಪನೆ ಸಾಕಾರಗೊಳ್ಳುವಂತಾಗಲು, ಜಿ. ಪ. ಕಾಯ್ದೆಯಲ್ಲಿರುವಂತೆ ಮತ್ತಷ್ಟು ಹೆಚ್ಚು ಅಧಿಕಾರವನ್ನು ಸರ್ಕಾರ ಪರಿಷತ್ತುಗಳಿಗೆ ವರ್ಗಾಯಿಸಬೇಕೆಂದು ಒತ್ತಾಯಿಸಿದ ಸಭೆ, ಈ ಬಗ್ಗೆ 18 ನಿರ್ದಿಷ್ಟ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದೆ.

ಜಿ. ಪ. ಸದಸ್ಯರು ತಮ್ಮ ಕ್ಷೇತ್ರದಾದ್ಯಂತ ಸಂಚರಿಸಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತೆ ಅವರಿಗೆ ತಿಂಗಳಿಗೆ 750 ರೂ. ಗೌರವ ಧನ ನೀಡಬೇಕೆಂಬುದು ಈ ಬೇಡಿಕೆಗಳಲ್ಲೊಂದು. ವಿಶೇಷವಾಗಿ ದುರ್ಬಲ ವರ್ಗದ ಮತ್ತು ಮಹಿಳಾ ಸದಸ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಬೇಡಿಕೆ ಮಂಡಿಸಿರುವುದಾಗಿ ಹೇಳಲಾಗಿದೆ.

ಶಾಲಾ ಮಕ್ಕಳಿಗೆ ಉಚಿತವಾಗಿ ನೀಡುತ್ತಿರುವ ಸಮವಸ್ತ್ರಗಳಿಗೆ ಅಗತ್ಯವಾದ ಬಟ್ಟೆಯನ್ನು ಕೈಮಗ್ಗಗಳಿಂದ ಪಡೆದು, ಟ್ರೈಸಂ, ದ್ವಾಕ್ರಾ ಮುಂತಾದ ಯೋಜನೆಗಳಡಿ ನಡೆಯುತ್ತಿರುವ ಸ್ಥಳೀಯ ಗ್ರಾಮೀಣ ಮಹಿಳಾ ಮಂಡಳಿ ಮುಂತಾದ ಘಟಕಗಳಲ್ಲಿ ಹೊಲಿಸಿ ವಿತರಣೆ ಮಾಡಲು ಜಿ. ಪ. ಗೆ ಅಧಿಕಾರ ನೀಡಬೇಕೆಂಬುದು ಒಂದು ಶ್ಲಾಘನೀಯ ಬೇಡಿಕೆಯಾಗಿದೆ.

ಜಿಲ್ಲಾ ಪರಿಷತ್ತಿಗೆ ವಿವಿಧ ಇಲಾಖೆಗಳಿಂದ ನಿಯೋಜಿತರಾಗುವ ಎಲ್ಲಾ ವರ್ಗದ ಸಿಬ್ಬಂದಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳುವ ಅಧಿಕಾರವನ್ನು ಪರಿಷತ್ತಿಗೆ ನೀಡಬೇಕೆಂಬುದು ಮುಖ್ಯ ನಿರ್ಣಯಗಳಲ್ಲೊಂದು

ಪಡಿತರ, ಕಾಮಗಾರಿ, ಅನುದಾನ, ನೇಮಕಾತಿ ಸಮಿತಿ, ಸಿಬ್ಬಂದಿ, ಸಂಬಳ, ಸಂಪನ್ಮೂಲ ಕ್ರೋಢೀಕರಣ ಮುಂತಾಗಿ ಇಡೀ ಜಿ.ಪ. ವ್ಯವಸ್ಥೆ ನಿಜವಾದ ಅರ್ಥದಲ್ಲಿ ಬಲಗೊಳ್ಳುವಂತಹ ಹಲವು ಮೂಲಭೂತ ಅಂಶಗಳನ್ನು ಈ ಬೇಡಿಕೆಗಳು ಒಳಗೊಂಡಿವೆ.

ಕೊಪ್ಪ ತಾ|| ಪಂಚಾಯ್ತಿ ಸಮಿತಿ ಪ್ರಥಮ ಸಭೆ

ಕೊಪ್ಪ: ಈ ತಾಲ್ಲೂಕಿನ ಪಂಚಾಯ್ತಿ ಸಮಿತಿಯ ಪ್ರಥಮ ಸಭೆ ಸೆ. 21ರಂದು ನಡೆಯಿತು. ಕ್ಷೇತ್ರಾಭಿವೃದ್ಧಿ ಅಧಿಕಾರಿ ಎನ್. ರಾಮಮೂರ್ತಿ ಸ್ವಾಗತಿಸಿ, ತಾ|| ಪಂಚಾಯ್ತಿ ಸಮಿತಿಯ ಕಾರ್ಯ ಹಾಗೂ ರೂಪುರೇಷೆಗಳ ಬಗ್ಗೆ ವಿವರಿಸಿದರು. ನಂತರ ಸಭೆಯ ಅಧ್ಯಕ್ಷತೆ ವಹಿಸಿದ್ದ ಎಚ್. ಜಿ. ಗೋವಿಂದ ಗೌಡರು ಮಾತನಾಡಿ, ತಾಲ್ಲೂಕ್ ಪಂಚಾಯ್ತಿ ಸಮಿತಿಯ ಉದ್ದೇಶ, ಮಂಡಲ ಪಂಚಾಯ್ತಿಗಳಿಗೂ ಹಾಗೂ ತಾ|| ಪಂಚಾಯ್ತಿ ಸಮಿತಿಗೂ ಇರುವ ಸಂಬಂಧವನ್ನು ವಿವರಿಸುತ್ತಾ, ಎಲ್ಲಾ ಜಿಲ್ಲಾ ಪರಿಷತ್ ಸದಸ್ಯರು, ಮಂಡಲ ಪ್ರಧಾನರೂ ಹಾಗೂ ತಾ|| ಮಟ್ಟದ ಅಧಿಕಾರಿಗಳು ಇದರ ಕಾರ್ಯ ನಿರ್ವಹಣೆಯಲ್ಲಿ ಸಹಕರಿಸಲು ಕೋರಿದರು. ಹರಿಜನ, ಗಿರಿಜನ, ಮಹಿಳೆ, ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಐದು ಮಂದಿಯನ್ನು ಸಮಿತಿಗೆ ಸೇರಿಸಿಕೊಳ್ಳುವ ಬಗ್ಗೆ ನಿರ್ಣಯವನ್ನು ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಮುಂದಿನ ಸಭೆ ನವೆಂಬರ್ 4ರಂದು ನಡೆಯುವುದು.

ವಿದ್ಯುತ್ ಕಣ್ಣು ಮುಚ್ಚಾಲೆ

ವಿದ್ಯುತ್ ಮಂಡಳಿಯ ಕಣ್ಣು ಮುಚ್ಚಾಲೆಯ ಕಪಿಚೇಷ್ಟೆಯಿಂದ ಸಂತುಷ್ಟರಾದ ಜಯಪುರದ ನಾಗರಿಕರು ತಮ್ಮ ಮಕ್ಕಳಿಗೆ ಹೊಸ ಬಗೆಯ ಹಾಡು ಹೇಳಿಕೊಡಲು ಪ್ರಾರಂಭಿಸಿದ್ದಾರಂತೆ. ಕ. ವಿ. ಮಂ. ಎದುರು ಇಲ್ಲಿನ ಬಳಕೆದಾರರು ಯಾವ ಹಾಡು ಹಾಡಿದರೂ ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ ಆಗುವುದಂತೂ ನಿಜ.

ಇತ್ತೀಚಿಗೆ ಜಿಲ್ಲಾ ಹಾಗೂ ಯುವಜನ ಸಚಿವರು ಇಲ್ಲಿ ಕಾರ್ಯಕ್ರಮಕ್ಕೆ ಬಂದಾಗ, ಸದಾ ವಿದ್ಯುತ್ ಸರಬರಾಜು ಕಡಿತ ಇರುವ ಬೆಳಗಿನ ಸಮಯ ...

... ಇಲ್ಲದೆ ವಿದ್ಯುತ್ ಸರಬರಾಜು ಆಗಿದ್ದಕ್ಕೆ ಕಾರಣ ಬಹುಶಃ ಬಿ. ಎಲ್. ಶಂಕರ್‌ರವರ ಅಧಿಕಾರದ 'ಪವರ್' ಈ ಕ. ವಿ. ಮಂ. 'ಪವರ್' ಅನ್ನು ಹೊತ್ತಿಸಿದ್ದೇ ಇರಬೇಕು !

ಸಂಜೆ 7 ರಿಂದ 9 ಗಂಟೆಯ ಅವಧಿಯಲ್ಲಿ ಕನಿಷ್ಠ 4-5 ಸಲ ಹೋಗಿ ಬರುತ್ತಾ, ಒಂದೂವರೆ ಗಂಟೆ ಅವಧಿಯ ನೈಜ ವಿದ್ಯುತ್ ಖೋತಾ ಅನುಭವಿಸುವ ಜಯಪುರದ ಬಳಕೆದಾರರ ಸಹನೆಯನ್ನು ಮೆಚ್ಚಲೇಬೇಕು. ಕಷ್ಟಪಟ್ಟು ಇಷ್ಟಾದರೂ ವಿದ್ಯುತ್ ಸರಬರಾಜು ಮಾಡುವ ಕ. ವಿ. ಮಂಡಳಿಗೆ ಜಯವಾಗಲಿ !

'ಕರಾಜಿಗಳು': ಅಂದು ದಲಿತರು, ಇಂದು ಬಲಿತವರೆ ?

ದಕ್ಷಿಣ ಕನ್ನಡ ಜಿಲ್ಲೆಯಿಂದ ಈ ಮಲೆನಾಡಿನ ಕಾಫಿ ತೋಟಗಳಿಗೆ ವಲಸೆ ಬಂದ 'ಕರಾಜಿ'ಗಳೆಂಬ ಅಸ್ಪೃಶ್ಯರಿದ್ದಾರೆ. ಈ ದಲಿತರು ಸಹಸ್ರಾರು ವರ್ಷಗಳಿಂದ 'ಮನು'ವಿನ ಸಂವಿಧಾನದ ಕಟ್ಟುಪಾಡಿನಂತೆ ದೌರ್ಜನ್ಯಕ್ಕೆ ಒಳಗಾಗಿ ಅಸ್ಪೃಶ್ಯರಾದವರು. ಪುರಾತನ ಸಾಮಾಜಿಕ ವ್ಯವಸ್ಥೆಯಲ್ಲಿ ಅನಿರ್ಭವಿಸಿರುವ 3500ಕ್ಕೆ ಮೇಲ್ಪಟ್ಟು ಇರುವ ನಮ್ಮ ದೇಶದ ಜಾತಿ ವ್ಯವಸ್ಥೆಯ ಮೆಟ್ಟಲಿನಲ್ಲಿ ಇವರ ಸ್ಥಾನ ಎಷ್ಟು ಕೆಳಗೆಂದರೆ ಕೊನೆಯ ಮೆಟ್ಟಲೇ ಇವರದ್ದು. ವಲಸೆ ಬಂದ ಈ ದ.ಕ.ದ ಹರಿಜನರು ಇಲ್ಲಿಯ ಮೇಲು ಜಾತಿಯ ಜನರಿಗೆ ಕರಿ ಜನರು (ಕಪ್ಪು ಜನರು) ಆದರು; ಈ ಹೆಸರು ಇವರಿಗೆ ಅಂಟಿಕೊಳ್ಳುತ್ತಾ 'ಕರಾಜಿ'ಗಳೆಂದು ಮೇಲು ವರ್ಗದವರು ಕರೆದರೆಂದು ಕಾಣು

ಕೃಷ್ಣ ಭಂಡಾರಿ

ತ್ತದೆ. ವಾಸ್ತವವಾಗಿ ಇದೇನು ಇವರ ಜಾತಿಯ ಹೆಸರಲ್ಲ ಅಥವಾ ನಮ್ಮ ಸರ್ಕಾರ ಪ್ರಕಟಿಸಿರುವ ಜಾತೀಯ ಪಟ್ಟಿಯಲ್ಲಿ ಈ 'ಕರಾಜಿ' ಎನ್ನುವ ಹೆಸರು ಎಲ್ಲೂ ಬರುವುದಿಲ್ಲ.

ಆದರೂ ಇವರು ಎಂದೂ ಒಪ್ಪಿಕೊಳ್ಳದ, ಜಾತಿ ಸೂಚಕ ಹೆಸರು ಅಗದ ಈ 'ಕರಾಜಿ' ಇವರ ಬೆನ್ನು ಹತ್ತಿದ ಬೇತಾಳವಾಗಿದೆ; ಕನಿಷ್ಠ ದಿನದ ಕೂಳಿಗೂ ಗತಿ ಇಲ್ಲದ ಈ ಜನ ಇಂದು ನ್ಯಾಯಾಲಯಕ್ಕೆ ಅಲೆದಾಡುವ ಪರಿಸ್ಥಿತಿ ಬಂದಿದೆ.

ಇವರ ಮೂಲವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವರಿಗೆ 'ಆದಿ ದ್ರಾವಿಡ' ಎಂಬ ಸರ್ಟಿಫಿಕೇಟ್ ನೀಡಲಾಗುತ್ತಿದೆಯಂತೆ. (ಇದು ಹಳೇ ಮದ್ರಾಸ್ ಪ್ರಾಂತ್ಯದಲ್ಲಿ 'ಆದಿ ಕರ್ನಾಟಕ' ಎಂಬ ಪದಕ್ಕೆ ಸಮಾನಾರ್ಥಕ ಪದ.) ಆದರೆ ಇಲ್ಲಿ ಇವರಿಗೆ ಆ 'ಸೌಲಭ್ಯ' ಇಲ್ಲ. ಇಲ್ಲಿನವರು ಬೇಕಿದ್ದರೆ ತಮ್ಮ ಮೂಲ ದ. ಕನ್ನಡವೇ ಎಂದು ರುಜುವಾತು ಮಾಡಿ ಅಲ್ಲಿಂದಲೇ ಆ ಸರ್ಟಿಫಿಕೇಟ್ ತರಬೇಕು. ಆದರೆ ಇಲ್ಲಿ ನೆಲೆಸಿ ಎಷ್ಟೋ ತಲೆಮಾರುಗಳಾಗಿರುವ ಇವರಿಗೆ ಈಗ ಅಲ್ಲಿ ತಮ್ಮ ಮೂಲದವರೆಂದು ಗುರ್ತಿಸಲು ಸಾಮಾನ್ಯವಾಗಿ ಯಾರೂ ಇರುವುದಿಲ್ಲ. (ಮರಾಟಿಗರು ಎಂಬ ಗಿರಿಜನ ಪಂಗಡದವರ ಪರಿಸ್ಥಿತಿಯೂ ಇದೇ.)

ಹೀಗಾಗಿ ನಮ್ಮ ಪ್ರಾಚೀನ ಭಾರತದ 'ಸಂವಿಧಾನ ಶಿಲ್ಪಿ' ಮನುವಿನಿಂದ 'ಶಾಪಗ್ರಸ್ತ'ರಾದ ಇವರಿಗೆ ಆಧುನಿಕ ಭಾರತ ಸಂವಿಧಾನ ಶಿಲ್ಪಿ ಅಂಬೇಡ್ಕರ್ ವಿಮೋಚನೆಗೆ ದಾರಿ ಮಾಡಿ ಕೊಟ್ಟಿದ್ದರೂ ಅದನ್ನು ಬಳಸಿಕೊಳ್ಳಲು ದಾರಿಯಿಲ್ಲವಾಗಿದೆ. ಆದರೂ ಕೂಡ, ಹೃದಯವಿರುವ ಯಾರಿಗೆ ಬೇಕಾದರೂ ಗೊತ್ತಿರುವಂತೆ ತಮ್ಮ ವಾಸ್ತವಿಕ 'ಅಸ್ಪೃಶ್ಯತನ'ದ ಆಧಾರದ ಮೇಲೆಯೇ ಇವರು ಆ ಕೊನೆಯ ಮೆಟ್ಟಲಿನಿಂದ ಮೇಲೇರಲು ಒಂದು ಸಣ್ಣ ಪ್ರಯತ್ನವನ್ನು ಈಚೆಗೆ ಮಾಡಿದ್ದರು. ಈಗ ಅದೇ ಇವರಿಗೆ ಮುಳುವಾಗಿ, ಕೋರ್ಟಿಗೆ ಅಲೆಯುವಂತಾಗಿದೆ.

ಕಳೆದ ಮಂಡಲ್ ಪಂಚಾಯ್ತಿ ಚುನಾವಣೆಗಳಲ್ಲಿ ಈ ಪಂಗಡದ ಹಲವು ಜನರು ಪ. ಜಾತಿಯ ಮೀಸಲು ಸ್ಥಾನಗಳಿಗೆ ಸ್ಪರ್ಧಿಸಿ ಗೆದ್ದೂ ಬಂದರು. ಆದರೆ, ಮಂಡಲಗಳ ಅಧಿಕಾರ ಹಿಡಿಯುವ ರಾಜಕೀಯ ಪಕ್ಷಗಳ ತಂತ್ರಗಾರಿಕೆ ಇವರನ್ನು ಕೋರ್ಟು ಕಟ್ಟೆ ಹತ್ತಿಸಿಬಿಟ್ಟಿತು. ಇವರ ಬಳಿ ಪ. ಜಾತಿ ಸರ್ಟಿಫಿಕೇಟ್ ಇಲ್ಲದಿರುವ 'ತಾಂತ್ರಿಕ' ಅಂಶವೊಂದೇ ಇದಕ್ಕೆ ಕಾರಣವಾಯಿತು. ಇವರು ನಿಜವಾಗಿಯೂ ಅಸ್ಪೃಶ್ಯರಾಗಿ ಬದುಕು ನೀಗುತ್ತಿದ್ದಾರೆಂಬ ಮಾನವೀಯ ಅಂಶ ಲೆಕ್ಕಕ್ಕೆ ಬರಲಿಲ್ಲ. ಇವರು ದಲಿತರೇ ಅಲ್ಲ ಎಂಬುದೇ ನ್ಯಾಯಾಲಯಕ್ಕೊಪ್ಪಿಸಿದ ವಾದವಾಗಿದೆ ಹೀಗೆ ಪ್ರಕರಣವನ್ನು ಕೋರ್ಟಿಗೊಯ್ದಿರುವವರು ಈ ಪಂಗಡದ ಅಭ್ಯರ್ಥಿಗಳೆದುರು ಸೋತ ಕಾಂಗ್ರೆಸ್ ಅಭ್ಯರ್ಥಿಗಳಾಗಿದ್ದಾರೆ.

ಅಂದರೆ, ಇವರು ದಲಿತರಲ್ಲ ಎಂಬ ವಾದ ಮುಂದಿಸಿ, ಇವರನ್ನು ಕೋರ್ಟಿಗೆ ಎಳೆದಿರುವುದು ಸ್ಥಳೀಯ ದಲಿತರ ಮೂಲಕವೇ ಎಂಬುದು ಇಲ್ಲಿನ ಇನ್ನೊಂದು ದುರಂತ.


(ಈ ಪ್ರಶ್ನೆಯ ಹಿಂದಿರುವ ಮಾನವೀಯ ಮುಖದ ಅರಿವು ಕೊಪ್ಪ ತಾ|| ಕಾಂಗ್ರೆಸ್ ಅಧ್ಯಕ್ಷ ವಿಜಯ ಅಜಲ ಅವರಿಗಿದೆ. ನ್ಯಾಯಾಲಯದ ತೀರ್ಪು ಈ ದಲಿತರಿಗೆ ವಿರೋಧವಾಗಲಿಕ್ಕಿಲ್ಲ ಎಂಬ ಆಶಯ ಅವರದು. ಏಕೆಂದರೆ ಸಂಬಂಧಪಟ್ಟವರಿಗೆ ಈ ಒಂದು ಸರ್ಟಿಫಿಕೇಟ್ ದೊರಕಿಸಿಕೊಳ್ಳುವುದು ಅಸಾಧ್ಯವಾಗಲಿಕ್ಕಿಲ್ಲ ಎಂಬುದು ಅವರ ನಂಬಿಕೆ. 'ಮುಂಜಾವು' ಅವರನ್ನು ಈ ವಿಚಾರದ ಬಗ್ಗೆ ಕೇಳಿದಾಗ ತಿಳಿದು ಬಂದ ಅಂಶ ಇದು. —ಸಂ)

ಅಂತೂ ಈ ವರ್ಷದಿಂದ ಇವರಿಗೆ ಪರಿಶಿಷ್ಟ ಜಾತಿ ದೃಢೀಕರಣ ಪತ್ರ ನೀಡಲು ಇಲ್ಲಿನ ಅಧಿಕಾರಿಗಳು ನಿರಾಕರಿಸುತ್ತಿದ್ದಾರೆ. ಗ್ರಾಮ ಕಛೇರಿ, ತಾಲ್ಲೂಕು ಕಛೇರಿ–ಹೀಗೆ ಅಲೆದಾಡಿದ್ದೇ ಬಂತು. ಕೆಲವರು ಇವರನ್ನು ದಬಾಯಿಸಿ ಕಳುಹಿಸಿದ್ದೂ ಇದೆ. ಕೆಲವರು ಇವರ ಸ್ಥಿತಿ ನೋಡಿ ಅನುಕಂಪಿಸಿ ನಿಸ್ಸಹಾಯಕತ್ವವನ್ನು ಪ್ರಕಟಿಸಿದ್ದೂ ಇದೆ. ಪರಿಶಿಷ್ಟ ಜಾತಿಯ ವಿದ್ಯಾರ್ಥಿ ನಿಲಯಕ್ಕೆ ಸೇರಲು ಈ ಗೊಂದಲದಿಂದಾಗಿ ಸಾಧ್ಯವಾಗದೆ, ಈ ಜಾತಿಯ ಎಷ್ಟೋ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಅರ್ಧಕ್ಕೆ ನಿಲ್ಲಿಸಿ

(3ನೇ ಪುಟಕ್ಕೆ)

ಹಳ್ಳಿಗಾಡಿನ ಎರಡು ಕಲಾ ಮತ್ತು ಸಾಹಿತ್ಯ ಸಂಸ್ಥೆಗಳು :

ಹು. ವಾ. ಪ್ರಕಾಶನ ಮತ್ತು 'ಹವಿಸಂ'



ಕಲೆ, ಸಾಹಿತ್ಯಗಳ ಸುಸಂಸ್ಕೃತ ಅಭಿರುಚಿ ಮಾತ್ರವಲ್ಲ, ಉತ್ತಮ ಪ್ರತಿಭೆ–ಕೆಲವೊಮ್ಮೆ ಪ್ರೌಢಿಮೆ ಸಹ–ಇರುವ ಎಷ್ಟೋ ಜನ ನಮ್ಮ ನಾಡಿನ ಹಳ್ಳಿಗಾಡುಗಳಲ್ಲಿ ಹುದುಗಿದ್ದಾರೆಂಬುದು ಈಗಾಗಲೇ ಎಲ್ಲೆಡೆ ಬೆಳಕಿಗೆ ಬರುತ್ತಿದೆ. ಮಣ್ಣಿನಡಿ ಸೇರಿ ಹೋಗಿರುವ ಇಂಥ ವಜ್ರದ ಕಲ್ಲುಗಳಿಗೆ ಸಾಣೆ ಹಿಡಿದು ವಜ್ರದ ಹರಳಾಗಿಸುವ ಕೆಲಸ ಮಾತ್ರ ಅಗತ್ಯಕ್ಕೆ ತಕ್ಕಷ್ಟು ಆಗುತ್ತಿಲ್ಲ.

ಆದರೂ ಇಂಥವರು ಅಲ್ಲಲ್ಲೇ ಒಟ್ಟಾಗಿ ಸಣ್ಣ ಪುಟ್ಟ ತಂಡ–ವೇದಿಕೆಗಳನ್ನು ರಚಿಸಿಕೊಂಡು ಜಿಲ್ಲೆ–ರಾಜ್ಯಮಟ್ಟಗಳಲ್ಲಿಯೂ, ಕೆಲವೊಮ್ಮೆ ರಾಷ್ಟ್ರ ಮಟ್ಟದವರೆಗೂ ಮಿಂಚುತ್ತಿರುವುದನ್ನು ಕೂಡ ಆಗೀಗ ಕಾಣುತ್ತೇವೆ.

'ಬೆಳೆವ ಸಿರಿ ಮೊಳಕೆಯಲ್ಲಿ' ಕಾಣುವ ಇಂಥದೊಂದು ತಂಡ ಜಯಪುರ ಸಮೀಪದ ದೂಬಳ ವೀರಗಲ್ಲು ಮಕ್ಕಿ ಪ್ರಾಥಮಿಕ ಶಾಲೆಯ 'ಹವಿಸಂ'–ಅಂದರೆ ಹಳೇ ವಿದ್ಯಾರ್ಥಿಗಳ ಸಂಘ. (ಈ 'ಹಳೇ ವಿದ್ಯಾರ್ಥಿಗಳ'ಲ್ಲಿ ಕೆಲವರ ಮಕ್ಕಳು ಕೂಡ ಈಗ ಈ ಸಂಘದ ಸದಸ್ಯರಾಗಿರುವುದಿದೆ !)

ಈ ತಂಡಕ್ಕೆ ಒತ್ತಾಸೆಯಾಗಿರುವುದು 'ಹು. ವಾ. ಪ್ರಕಾಶನ'. ಉತ್ತಮ ಸಾಹಿತ್ಯ 'ಪರಿಶ್ರಮಿ'ಗಳಾದ ಇವರು ಅಂತೆಯೇ ಉತ್ತಮ ಅಭಿರುಚಿಯ, ಹಳ್ಳಿಗಾಡಿನವರ ಸಾಹಿತ್ಯಕ ತೊದಲ್ನುಡಿ–ತೊಡರು ಹೆಜ್ಜೆಗಳಿಗೆ ಪ್ರಕಾಶನದ ಬೆಳಕು ಒದಗಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಆರಂಭಿಸಿರುವ ಈ ಪ್ರಕಾಶನದ ವತಿಯಿಂದ ಮಲೆನಾಡಿನ ಉದಯೋನ್ಮುಖ ಕವಿಗಳ ಕವನ ಸಂಕಲನ 'ಮಿನುಗು'ವನ್ನು ಪ್ರಕಟಿಸಿದ್ದು, ಇನ್ನೂ ಕೆಲವು ಯೋಜನೆಗಳನ್ನು ರೂಪಿಸುತ್ತಿದ್ದಾರೆ.

ಇನ್ನೂ ಅಂಬೆಗಾಲಿಡುತ್ತಿರುವ ಈ ಅವಳಿ ಸಂಸ್ಥೆಗಳು ಬೆಳಕು ಕಂಡು ಇದೇ ನವೆಂಬರ್ 19ಕ್ಕೆ ಒಂದು ವರ್ಷವಾಗುತ್ತದೆ.

ಶ್ರೀಧರ್ 'ಉತ್ತಮ ನಟ'

ಬಿಳಾಲ್‌ಕೊಪ್ಪ ಮೇರುತಿ ಜೇಸೀಸ್ ಆಶ್ರಯದಲ್ಲಿ ಈಚೆಗೆ ನಡೆದ ಜಿಲ್ಲಾ ಮಟ್ಟದ ನಾಟಕ ಸ್ಪರ್ಧೆಯಲ್ಲಿ 'ಹವಿಸಂ' ಸದಸ್ಯರು ಪ್ರದರ್ಶಿಸಿದ ವಿಚಾರ ಪೂರ್ಣ ನಾಟಕ

(3ನೇ ಪುಟಕ್ಕೆ)

ಪದ್ಯದಂಕಣ

ನಾವು ಭಾರತೀಯರು

ಏಕೆ ಹೇಳು ಮನುಜ ಇದೇನು ನಿನ್ನ ಧರ್ಮ
ಹೊರಗೆ ಒಂದು ಒಳಗೆ ಒಂದು ಏಕೆ ತಾರತಮ್ಯ ?
ಭೇದವೆಲ್ಲಿ ಜಾತಿಯಲ್ಲಿ ಎಲ್ಲ ಒಂದೆ ಎನುವೆ
ನಡುವೆ ಒಮ್ಮೆ ನಮ್ಮದೊಂದೆ ಉಚ್ಚ ಕುಲವು ಎನುವೆ
ಇಂಥ ಕಾಲದಲ್ಲಿ ನಿನ್ನದೇನು ಜಾತಿ ಹುಚ್ಚು
ಭರತ ಮಾತೆಗೆಲ್ಲ ಒಂದೆ ಯಾರು ಇದರಲ್ಲೆ ಚಚ್ಚು

ಉರಿವ ಸೂರ್ಯಗಿಲ್ಲ ಇಂಥ ಜಾತಿ ಭೇದ ಭಾವ
ಬೆಳದಿಂಗಳ ನೀಡೋ ಶಶಿಗೆ ಇಲ್ಲ ಇಂಥ ಹೃದಯ
ಭಾರತಾಂಬೆ ಮಕ್ಕಳಲ್ಲಿ ಹರಿವುದೊಂದೆ ರಕ್ತ
ದೇವರಲ್ಲಿ ಇಲ್ಲ ಭೇದ ಎಲ್ಲರವನ ಭಕ್ತ

ಮೇಲು ಕೀಳು ಎಂಬುದೆಲ್ಲ ಹುಟ್ಟಿನಿಂದ ಬರದು
ತಾಯಿಗೊಂದೆ ಮಕ್ಕಳೆಲ್ಲ ಭೇದ ಭಾವ ಇರದು
ಪಕ್ಷಿ ಪ್ರಾಣಿಗಳಲಿ ಉಂಟೆ ಮೇಲು ಕೀಳು ಜಾತಿ
ರಕ್ಷಿಸುವ ದೇವಗುಂಟೆ ತಾರತಮ್ಯ ನೀತಿ ?

ಕಾವೇರಿಯಾದರೇನು ಹರಿವ ನೀರು ತಂಪು
ಕರಿಯ ಹಸುವು ಕೊಡುವುದೇನು ಕುಡಿವ ಹಾಲು ಕಪ್ಪು ?
ಉಚ್ಚ ಜನರು ಇಳಿವರೇನು ಸ್ವರ್ಗದಿಂದ ಧರೆಗೆ
ಬರುವುದೊಂದೆ ಮಾರ್ಗವಂತೆ ಭೇದವೇಕೆ ಕೊನೆಗೆ ?

ಮೇಲು ಜಾತಿ ಎಂಬುದೆಲ್ಲ ಹುಟ್ಟಿನಿಂದ ಮೂಡದು
ನಡತೆಯಲ್ಲಿ ಶುದ್ಧ ಬೇಕು ಭೇದ ಭಾವ ಕೂಡದು
ನಡೆದು ಮಲಗಲೆಲ್ಲ ನಮಗೆ ಇರುವುದೊಂದೆ ಭೂಮಿ
ಹರಿವ ನದಿಗೆ ಉಂಟೆ ಇಂಥ ಭೇದ ಭಾವ ಸ್ವಾಮಿ ?

ಅನ್ನ ನೀಡೋ ಭೂಮಿ ತಾಯಿಗಿಲ್ಲ ಇಂಥ ಭೇದ
ಜನ್ಮ ನೀಡೋ ತಾಯಿ ಹೆಣ್ಣು ನಮ್ಮಲೇಕೆ ವಾದ
ಇರುವುದೊಂದೆ ಮನೆಯು ನಮಗೆ ಭರತ ಮಾತೆ ಮಂದಿರ
ಜಾತಿ ಮರೆತು, ನೀತಿ ಅರಿತು ಇರುವ ನಾವು ಸುಂದರ

ನಾಡ ತುಂಬ ಕಾಡ ಎಲೆಗೆ ಬಣ್ಣ ವೊಂದೆ ಹಸಿರು
ನಾವು ಕೂಡ ಸೇವಿಸುವುದು ಒಂದೆ ಗಾಳಿ ಉಸಿರು
ಇದರಿಂಥ ಭೇದವೇಕೆ ಜಾತಿಗೊಂದು ಹೆಸರು
ಒಂದೆ ಜಾತಿ ಒಂದೆ ಮತ, ನಾವು ಭಾರತೀಯರು

—"ಕವಿತಾನಂದ"

ಸುದ್ದಿ – ವಿಶೇಷ

ಬಲಾತ್ಕಾರದಿಂದ ರೂಪ್ ಕನ್ವರ್ 'ಸಹಗಮನ':

ಸತ್ಯಶೋಧಕ ಪತ್ರಕರ್ತರ ತಂಡದ ವರದಿ

ರಾಜಸ್ಥಾನದ ದೇವರಾಲಾ ಗ್ರಾಮದಲ್ಲಿ ಕಳೆದ ಸೆಪ್ಟೆಂಬರ್ 4ರಂದು ಸಹಗಮನದ ('ಸತಿ') ಹೆಸರಲ್ಲಿ 18 ವರ್ಷದ ತರುಣಿ ರೂಪ್ ಕನ್ವರ್‌ಳನ್ನು ಬಲವಂತವಾಗಿ ಸುಟ್ಟು ಹಾಕಲಾಯಿತೆ?

ಹೌದೆನ್ನುತ್ತದೆ, ಮುಂಬೈನ ಅಧ್ಯಯನ ತಂಡವೊಂದು ದೇವರಾಲಾದಲ್ಲಿ ವ್ಯಾಪಕ ಸಮೀಕ್ಷೆ ನಡೆಸಿ, ಪ್ರತ್ಯಕ್ಷದರ್ಶಿಗಳು, ತನಿಖಾಧಿಕಾರಿಗಳು, ವೈದ್ಯರು ಮುಂತಾದವರಿಂದ ಮಾಹಿತಿ–ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಒಂದು ವರದಿ.

ಮುಂಬೈಯ ಕಾರ್ಯನಿರತ ಪತ್ರಕರ್ತರ ಸಂಘದ 'ಮಹಿಳೆ ಮತ್ತು ಮಾಧ್ಯಮ' ವಿಭಾಗ ಕಳುಹಿಸಿದ್ದ ಸತ್ಯಶೋಧಕ ಕಾರ್ಯತಂಡ ಈ ವರದಿ ತಯಾರಿಸಿದೆ.

ಬಣವೆಯಲ್ಲಿ ಅಡಗಿಕೊಂಡಳು

ರೂಪ್ ಕನ್ವರಳ ಗಂಡ ಮಾಲ್ ಸಿಂಗ್ ತೀರಿಕೊಂಡಾಗ ಮಾವನ ಮನೆಯವರು ಆಕೆಯ ಸಹಗಮನಕ್ಕೆ ಸಿದ್ಧತೆ ಮಾಡುತ್ತಿದ್ದುದನ್ನು ತಿಳಿದ ಆಕೆ ಒಂದು ಬಣವೆಯಲ್ಲಿ ಬಚ್ಚಿಟ್ಟುಕೊಂಡಳು. ಆದರೆ ಅವಳನ್ನು ಮನೆಯಿಂದ ಹೊರಕ್ಕೆಳೆದು ತಂದು, (ಸಿಂಗರಿಸಿ) ಚಿತೆಯ ಮೇಲೆ ಕೂರಿಸಲಾಯಿತು. ಅಲ್ಲಿಂದಲೂ ಆಕೆ ತಪ್ಪಿಸಿಕೊಳ್ಳಲು ಹೆಣಗಾಡಿದಳು. ಆದರೆ ದೊಡ್ಡ ಕಟ್ಟಿಗೆಯ ತುಂಡುಗಳಿಂದಾಗಿ ಅದು ಸಾಧ್ಯವಾಗಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಅಂತೂ ಅವಳು ತನ್ನಿಚ್ಛೆಯಿಂದಲೇ 'ಸತಿ'ಯಾದುದಲ್ಲ ಎನ್ನಲು ವಿಪುಲವಾದ ಸಾಕ್ಷ್ಯಾಧಾರಗಳಿವೆ ಎಂದು ವರದಿ ತಿಳಿಸಿದೆ.

ಧಾರ್ಮಿಕ, ಸಾಮಾಜಿಕ ಕೊಲೆ

ರೂಪ್ ಕನ್ವರ್ ತಾನೇ ಚಿತೆಗೆ ಬೆಂಕಿ ಹಚ್ಚಿದಲ್ಲ, ಬೇರೊಬ್ಬ ವ್ಯಕ್ತಿ ಹಚ್ಚಿದ್ದು, ಆದ್ದರಿಂದ ಕಾನೂನು ರೀತಿಯಲ್ಲಿ ಮಾತ್ರವಲ್ಲ, ಸಾಮಾನ್ಯ ಪರಿಜ್ಞಾನದಿಂದ ಯೋಚಿಸಿದರೂ ಸಹ, **ಆಕೆಯನ್ನು ಕೊಲೆ ಮಾಡಲಾಗಿದೆ ಎಂದೇ ಅರ್ಥ. ಆದರೆ ಈ ಕೊಲೆಗೆ ಸಾಮಾಜಿಕ ಮತ್ತು ಧಾರ್ಮಿಕ 'ಮನ್ನಣೆ' ಸಿಕ್ಕಿದೆ, ಅಷ್ಟೇ** ಎಂದು ವರದಿ ಹೇಳಿದೆ.

ರಜಪೂತ ಜನಾಂಗದ ಬಾಯಿಬಲ್ಲ ಗುಂಪು 'ಸತಿ' ಪದ್ಧತಿಯನ್ನು "ಒಂದು ಗೌರವಯುತ ಸಂಪ್ರದಾಯ" ಎಂಬುದಾಗಿ ವೈಭವೀಕರಿಸಿ ಪುನರುಜ್ಜೀವನಗೊಳಿಸುತ್ತಿರುವುದು ಇದರಲ್ಲಿನ ಅತ್ಯಂತ ದುಷ್ಟ ಸಂಗತಿಯಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ನಂಬಿಕೆಯಿಲ್ಲ

ರೂಪ್ ಕನ್ವರ್‌ಳ ಸ್ಮಾರಕವೆಂದು ಒಂದು ದೇವಸ್ಥಾನ ಕಟ್ಟಿಸಲು ಸ್ಥಳೀಯರು 50 ಲಕ್ಷ ರೂ.ಗಳನ್ನು ಸಂಗ್ರಹಿಸಿದ್ದಾರಾದರೂ; ಸಮೀಪದ ಸಿಕಾರ್ ಎಂಬ ಊರಿನಲ್ಲಿ ಸೆ. 27ರಂದು ನಡೆದ ಒಂದು ಸಭೆಯಲ್ಲಿ ಗ್ರಾಮೀಣ ಜನತೆ ತಮಗೆ 'ಸತಿ' ಪದ್ಧತಿಯಲ್ಲಿ ಏನೇನೂ ನಂಬಿಕೆಯಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ನಿಜವಾದ ಕಾರಣವೇನು?

ಈ ಮಧ್ಯೆ ಈ ಸಹಗಮನದ ಪ್ರಕರಣಕ್ಕೆ ನಿಜವಾದ ಕಾರಣವೇನು; ರೂಪ್ ಕನ್ವರಳ ಗಂಡ ಮಾಲ್ ಸಿಂಗ್‌ನ ಸಾವಿಗೂ ಈ 'ಸತಿ'ಗೂ ಕಾರಣಗಳ ಸಂಬಂಧ ಎಂತಿದೆ–ಎಂಬುದನ್ನು ಸಿಐಡಿ ಜಾಗೃತಾ ದಳದ ಪೋಲೀಸರು ಪತ್ತೆಹಚ್ಚಲು ಪ್ರಯತ್ನಿಸುತ್ತಿದ್ದಾರೆ.

ಏಕೆಂದರೆ ಅವರ ಪ್ರಕಾರ ಮಾಲ್ ಸಿಂಗ್‌ನ ಸಾವು ಶಂಕಾಸ್ಪದವಾಗಿದೆ. ಅವನ ಕುಟುಂಬದ ವೈದ್ಯ ಡಾ|| ಮಗನ್ ಸಿಂಗ್ ತಲೆ ಮರೆಸಿಕೊಂಡಿದ್ದಾರೆ. ಮಾಲ್ ಸಿಂಗ್ ಸಾವಿಗೆ ಕಾರಣವಾದ ರೋಗ ಯಾವುದೆಂಬ

(4ನೇ ಪುಟಕ್ಕೆ)

ಅಂದು ದಲಿತರು, ಇಂದು ಬಲಿತವರೆ ?

(2ನೇ ಪುಟದಿಂದ)

ಕಾಫಿತೋಟದಲ್ಲಿ ದುಡಿಯಲು ಪ್ರಾರಂಭಿಸಿದ್ದಾರೆ. ಅವಿದ್ಯಾವಂತರೇ ಹೆಚ್ಚು ಇರುವ ಇವರಿಗೆ ತಮ್ಮ ಹಕ್ಕಿಗೆ ಹೇಗೆ ಸಂಘಟಿತ ಹೋರಾಟ ಮಾಡಬೇಕೆಂದೇ ತಿಳಿದಿಲ್ಲ.

ಬಹುಶಃ ಇನ್ನೂ ನಲ್ವತ್ತು ವರ್ಷ ಕಳೆದರೂ ನಮ್ಮ ದಲಿತರ ಸ್ಥಿತಿ ಹೀಗೇ ಇರುತ್ತದೆ. ರಾಜಕೀಯ ಪಕ್ಷಗಳು ಚುನಾವಣೆಯ ಸಮಯದಲ್ಲಿ ದಲಿತರ ಉದ್ಧಾರದ ಬಗ್ಗೆ ಉಗ್ರವಾದ ಭಾಷಣ ಮಾಡುತ್ತವೆ. ಪ್ರಚಾರದ ಕಾರುಗಳು ಧ್ವನಿವರ್ಧಕದ ಮೂಲಕ ಹರಿಜನ–ಗಿರಿಜನ ಉದ್ಧಾರಕ್ಕಾಗಿ ನಮಗೇ ಮತ ನೀಡಿ ಎಂದು ಬೊಗಳುತ್ತವೆ. ಉದ್ಧರಿಸಿಕೊಳ್ಳಲು ಹರಿಜನರು ಮತ್ತೆ 'ಕ್ಯೂ'ನಲ್ಲಿ ಕಾಯುತ್ತಾರೆ!

ಇವರ ಸಮಸ್ಯೆಯ ಬಗ್ಗೆ ಸರ್ಕಾರ ಈಗಲಾದರೂ ಗಮನ ಹರಿಸೀತೆ?

ಶೃಂಗೇರಿ ಭೂ ಅಭಿವೃದ್ಧಿ ಬ್ಯಾಂಕ್ ದಾಖಲೆ :

ಸತತ 2ನೇ ವರ್ಷವೂ ಲಾಭ ನಿರೀಕ್ಷೆ

ಶೃಂಗೇರಿ : ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕ್ ತನ್ನ ಇತಿಹಾಸದಲ್ಲಿ **ಸತತವಾಗಿ** ಎರಡನೇ ಬಾರಿಗೆ ಲಾಭಗಳಿಸುವ ಹೊಸ್ತಿಲಲ್ಲಿದೆಯೆಂದು ಅದರ ಅಧ್ಯಕ್ಷ ಕಂಬಳಗದ್ದೆ ಮಂಜುನಾಥ್ ತಿಳಿಸಿದ್ದಾರೆ.

ಈಗಿನ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಮೊದಲನೇ ವರ್ಷ (1985-86) ವಿವಿಧ ಯೋಜನೆಗಳಲ್ಲಿ 29 ಲಕ್ಷ ರೂ. ಸಾಲ ನೀಡಿ, ತನ್ನ 40 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ 93 ಸಾವಿರ ರೂ.ಗಳ ಲಾಭಗಳಿಸಿತು. ಈ ವರ್ಷ 271 ಜನ ಸದಸ್ಯರಿಗೆ 31 ಲಕ್ಷ ರೂ.ಗಳನ್ನು ನೀಡಿದ್ದು, 98 ಸಾವಿರ ರೂ.ಗಳ ಲಾಭಗಳಿಸುವ ನಿರೀಕ್ಷೆಯಲ್ಲಿದೆ ಎಂದಿದ್ದಾರೆ.

ಅನೇಕ ಅಡೆ–ತಡೆಗಳ ನಡುವೆಯೂ ಸಾಲದ ವಸೂಲಾತಿಯು ಕಳೆದ ವರ್ಷದಂತೆ ಶೇ. 86ರಷ್ಟಿದ್ದು ಜಿಲ್ಲೆಯಲ್ಲಿ 2ನೇ ಸ್ಥಾನವನ್ನು ಉಳಿಸಿಕೊಂಡಿದೆ. ಅಲ್ಲದೆ ಕಾರ್ಯನಿರ್ವಹಣೆಯಲ್ಲಿ ರಾಜ್ಯದ 177 ಬ್ಯಾಂಕುಗಳ ಪೈಕಿ 7ನೇ ಸ್ಥಾನದಲ್ಲಿದೆ ಎಂದು ಅವರು ತಿಳಿಸಿದ್ದಾರೆ. ಈ ಸಾಲಿನ ಅಂತ್ಯಕ್ಕೆ ಬ್ಯಾಂಕಿನ ದುಡಿಯುವ ಬಂಡವಾಳ 1 ಕೋಟಿ 32 ಲಕ್ಷವನ್ನು ತಲುಪಿದೆ.

ವಿಶೇಷ ಘಟಕ ಯೋಜನೆ, ಸಗಣಿ ಅನಿಲ ಸ್ಥಾವರಕ್ಕೆ ಸಾಲ, '100 ಬಾವಿ ಯೋಜನೆ' ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ಬಡ್ಡಿ ಸಹಾಯ ಧನ, ಮುಂತಾದ ಎಲ್ಲಾ ಸಾಮಾಜಿಕ ಅಭಿವೃದ್ಧಿ ಯೋಜನೆಗಳಲ್ಲೂ ಸಾಲ–ಸಹಾಯಧನ ನೀಡಿರುವ ಬ್ಯಾಂಕ್ ಇದೀಗ ಕೃಷಿಯೇತರ ಚಟುವಟಿಕೆಗಳಿಗೆ ಸಹ ನೆರವು ಒದಗಿಸುವ ಸಲುವಾಗಿ 10 ಲಕ್ಷ ರೂ.ಗಳನ್ನು ಮೀಸಲಿಟ್ಟಿದ್ದು, ಅರ್ಹರು ಇದರ ಪ್ರಯೋಜನ ಪಡೆದುಕೊಳ್ಳಬಹುದೆಂದು ತಿಳಿಸಿದ್ದಾರೆ.

ಈ ಎಲ್ಲ ಸಾಧನೆಗಳಿಗೆ ನೆರವಾದ ತಾಲ್ಲೂಕಿನ ರೈತ ಬಾಂಧವರನ್ನು ಅವರು ಅಭಿನಂದಿಸಿದ್ದಾರೆ.

ಹು. ವಾ. ಪ್ರಕಾಶನ ಮತ್ತು ಹ. ವಿ. ಸಂ.

(2ನೇ ಪುಟದಿಂದ)

'ಭ್ರಮೆಗಳಲ್ಲಿ ಬದುಕಿದವರು' ಕೆಲವು ಕೊರತೆಗಳಿಂದಾಗಿ ತೀರ್ಪುಗಾರರ ಪೂರ್ಣ ಅಂಕ ಪಡೆಯುವುದರಲ್ಲಿ ಸೋತರೂ, ತಂಡದ ಸದಸ್ಯ ತೋಟದಮನೆ ಶ್ರೀಧರ್ 'ಉತ್ತಮ ನಟ' ಪ್ರಶಸ್ತಿ ಪಡೆದದ್ದು ಹೆಮ್ಮೆಯ ವಿಚಾರ.

ಉದಯೋನ್ಮುಖ ಪ್ರತಿಭಾವಂತೆ

ಜಿ. ಕೆ. ಮಂಜುಳ

ಇತ್ತೀಚೆಗೆ ಜಯಪುರ ಮತ್ತು ಬಿಳಾಲುಕೊಪ್ಪದಲ್ಲಿ ಈ ತಂಡ ಪ್ರದರ್ಶಿಸಿದ ಕಾರ್ಯಕ್ರಮಗಳಲ್ಲಿ ತಂಡದ ಸದಸ್ಯೆ ಜಿ. ಕೆ. ಮಂಜುಳ ರಂಜನೀಯ ನೃತ್ಯ ಪ್ರದರ್ಶನ ನೀಡಿದಳು. ಪುತ್ತೂರಿನ ನಾಟ್ಯಾಚಾರ್ಯ ದಿ| ರಾಧಾಕೃಷ್ಣ ರಾವ್ ಅವರಲ್ಲಿ ನೃತ್ಯ ಶಿಕ್ಷಣ ಪಡೆದಿರುವ ಈ ಕಿರಿಯ ವಯಸ್ಸಿನ ಪ್ರತಿಭಾವಂತೆ ಮನಮಿಡಿಯುವ ಜಾನಪದ ಕಥೆಗಳನ್ನು ನೃತ್ಯ ರೂಪಕ್ಕೆ ಅಳವಡಿಸಿ ಈಗಾಗಲೇ ಬೆಂಗಳೂರಿನಲ್ಲಿ ಹಲವು ಕಾರ್ಯಕ್ರಮಗಳನ್ನು ನೀಡಿ ಮೆಚ್ಚುಗೆ ಪಡೆದಿದ್ದಾಳೆ.

ಸಕಲೇಶಪುರ, ಮಡಿಕೇರಿಗಳಲ್ಲಿ ಸಂಬಾರ ಮಂಡಳಿಯಿಂದ

ಏಲಕ್ಕಿ ಹರಾಜು ಕೇಂದ್ರಗಳ ಆರಂಭ

ಸಂಬಾರ ಮಂಡಳಿಯು (ಹಿಂದೆ ಏಲಕ್ಕಿ ಮಂಡಳಿ) ಏಲಕ್ಕಿ ಹರಾಜು ಕೇಂದ್ರಗಳನ್ನು ಕರ್ನಾಟಕದ ಪ್ರಮುಖ ಮಾರುಕಟ್ಟೆಗಳಾದ ಸಕಲೇಶಪುರ ಮತ್ತು ಮಡಿಕೇರಿಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ಆರಂಭಿಸಿದ್ದು, ಪ್ರತಿ ಸೋಮವಾರ ಸಕಲೇಶಪುರದಲ್ಲೂ ಮತ್ತು ಪ್ರತಿ ಬುಧವಾರ ಮಡಿಕೇರಿಯಲ್ಲೂ ಏಲಕ್ಕಿ ಹರಾಜನ್ನು ಏರ್ಪಡಿಸುತ್ತಿದೆ.

ಹರಾಜು ಕೇಂದ್ರಗಳ ವಿಳಾಸ: **1. ಏಲಕ್ಕಿ ಹರಾಜು ಕೇಂದ್ರ,** 125-ಎ, ಅಶೋಕ ರಸ್ತೆ, (ಬಸ್‌ಸ್ಟ್ಯಾಂಡ್ ಹಿಂಭಾಗ), ಸಕಲೇಶಪುರ

2. ಸರ್ಕಾರಿ ಶಾಖಾ ಮುದ್ರಣಾಲಯದ ಹತ್ತಿರ, ಇಂಡಸ್ಟ್ರಿಯಲ್ ಎಸ್ಟೇಟ್, ಮಡಿಕೇರಿ

ಮಂಡಳಿಯು ಶೇ. 1ರಷ್ಟು ಕಡಿಮೆ ಖರ್ಚಿನಲ್ಲಿ ಬೆಳೆಗಾರರು ಏಲಕ್ಕಿಯನ್ನು ಮೇಲ್ಕಂಡ ಹರಾಜು ಕೇಂದ್ರಗಳಲ್ಲಿ ಮಾರಾಟ ಮಾಡುವ ವ್ಯವಸ್ಥೆ ಮಾಡಿದೆ. ಮಾರಾಟವಾದ ಏಲಕ್ಕಿಯ ಪೂರ್ಣ ಕ್ರಯವನ್ನು ಆ ದಿನವೇ ಬೆಳೆಗಾರರಿಗೆ ಕೊಡುವ ಏರ್ಪಾಡನ್ನೂ ಸಹ ಮಾಡಲಾಗುವುದು.

ಏಲಕ್ಕಿ ಮಾರುಕಟ್ಟೆಯನ್ನು ನಿಯಂತ್ರಿಸುವ ಹಾಗೂ ಉತ್ತಮವಾದ ಬೆಲೆಯನ್ನು ದೊರಕಿಸಿ ಕೊಡುವ **ಈ ಕ್ರಮದ** ಸದುಪಯೋಗವನ್ನು ಏಲಕ್ಕಿ ಬೆಳೆಗಾರರು ಪಡೆದುಕೊಂಡು ತಮ್ಮ ಏಲಕ್ಕಿಯನ್ನು ಮಾರಲು ಮಧ್ಯವರ್ತಿಗಳನ್ನು ಅವಲಂಬಿಸದೆ, ಸಂಬಾರ ಮಂಡಳಿಯ ಹರಾಜು ಕೇಂದ್ರಗಳ ಮೂಲಕ ಮಾರಾಟ ಮಾಡುವಂತೆ ಕೋರಲಾಗಿದೆ. ಹರಾಜು ಕೇಂದ್ರಕ್ಕೆ ಏಲಕ್ಕಿಯನ್ನು ತರುವ ಮುನ್ನ, ಒಣಗಿಸಿ, ಸ್ವಚ್ಛಮಾಡಿ ಮತ್ತು ವಿಂಗಡಣೆ ಮಾಡಿ ತರುವುದರಿಂದ ಉತ್ತಮ ಬೆಲೆಯನ್ನು ಪಡೆಯಬಹುದು.

ಹರಾಜು ದಿನದಂದು, ಹರಾಜನ್ನು ಸಕಾಲದಲ್ಲಿ ನಡೆಸಲು ಹಾಗೂ ಹೆಚ್ಚಿನ ಒತ್ತಡವನ್ನು ನಿಯಂತ್ರಿಸಲು ಅನುಕೂಲವಾಗುವಂತೆ, ಏಲಕ್ಕಿಯನ್ನು ವಾರದ ಎಲ್ಲಾ ಕೆಲಸದ ದಿನಗಳಲ್ಲೂ (ಶನಿವಾರ ಮತ್ತು ಭಾನುವಾರಗಳು ಹೊರತುಪಡಿಸಿ) ಸ್ವೀಕರಿಸಲಾಗುವುದು.

ಹೆಚ್ಚಿನ ವಿವರಗಳಿಗೆ ಸಂಬಾರ ಮಂಡಳಿಯ ಕಛೇರಿಗಳನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಯನ ಮತ್ತು ತೀವ್ರವಾದ ಅಭ್ಯಾಸ ಅತೀ ಅಗತ್ಯ ಎಂಬುದನ್ನು ಈ ತಂಡ ಸದಾ ನೆನಪಿನಲ್ಲಿಟ್ಟುಕೊಂಡು ಬೆಳೆಯಲೆಂದು ಆಶಿಸೋಣ. ಅಂತಯೇ ಹಳ್ಳಿಗಾಡಿನ ಪ್ರತಿಭೆಗಳನ್ನು ಹುಡುಕಿ ತೆಗೆದು ಬೆಳಕಿಗೆ ತರುವುದರಲ್ಲಿ ಈ ಅವಳಿ ಸಂಸ್ಥೆಗಳ ಉತ್ಸಾಹ, ಚಟುವಟಿಕೆಗೆ ಕಲೆ–ಸಾಹಿತ್ಯಾಸಕ್ತರ ಪ್ರೋತ್ಸಾಹ ನಿರಂತರವಾಗಿ ದೊರೆಯಲಿ ಎಂದೂ ಹಾರೈಸೋಣ.

ಕೊಪ್ಪ ತಾ॥ಗೆ ಜನಾರ್ದನ ಪೂಜಾರಿ ಭೇಟಿ

ಕೊಪ್ಪ : ಈ ತಾಲ್ಲೂಕಿನ ಹರಿಹರಪುರ ಮತ್ತು ಜಯಪುರಗಳಲ್ಲಿ ಕೇಂದ್ರ ಸಚಿವ ಜನಾರ್ದನ ಪೂಜಾರಿಯವರು ಅ.28ರಂದು ಸಾಲಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸಾಲಗಳನ್ನು ವಿತರಿಸುವರು ಮತ್ತು ಬಡಜನರಿಂದ ಸಾಲದ ಅರ್ಜಿಗಳನ್ನು ಸ್ವೀಕರಿಸುವರು ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ತಾರಾದೇವಿ ಭೇಟಿ

ಲೋಕಸಭಾ ಸದಸ್ಯೆ ಡಿ. ಕೆ. ತಾರಾದೇವಿ ಅ. 19 ರಂದು ಇಲ್ಲಿಗೆ ಭೇಟಿ ನೀಡಿ ತಾಲ್ಲೂಕು ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಭಾಗವಹಿಸಿ ಕಾರ್ಯಕರ್ತರೊಡನೆ ಸಮಾಲೋಚನೆ ನಡೆಸಿದರು. ಅಧ್ಯಕ್ಷತೆಯನ್ನು ತಾ॥ ಸಮಿತಿ ಅಧ್ಯಕ್ಷ ವಿಜಯ ಅಜಿಲ ವಹಿಸಿದ್ದರು.

ತಾಲ್ಲೂಕಿನಲ್ಲಿಯ ಬರಪರಿಸ್ಥಿತಿಯನ್ನು ಚರ್ಚಿಸಿದ ಸಭೆ, ಪರಿಹಾರ ಕಾರ್ಯಗಳನ್ನು ಕೈಗೊಂಡು ಕೊಪ್ಪ ತಾಲ್ಲೂಕನ್ನು 'ಬರ ಪೀಡಿತ ಪ್ರದೇಶ'ವೆಂದು ಸಾರಬೇಕೆಂದು ಸರ್ಕಾರವನ್ನು ಒತ್ತಾಯಿಸಿತು.

ಇತ್ತೀಚೆಗೆ ಕಾಂಗ್ರೆಸ್ ಕಾರ್ಯಕರ್ತ ಜಯಪುರದ ಉಮೇಶ್ ಎಂಬವರ ಮೇಲೆ ಕೆಲವು ಗೂಂಡಾಗಳಿಂದ ನಡೆದ ಅಮಾನುಷ ಹಲ್ಲೆಯನ್ನು ಸರ್ವಾನುಮತದಿಂದ ಖಂಡಿಸಿದ ಸಭೆ, ಈ ಪ್ರಕರಣದಲ್ಲಿ ಪೋಲೀಸರ ನಿಷ್ಕ್ರಿಯತೆ ಬಗ್ಗೆ ವಿಷಾದಿಸಿತು.

ಜಿಲ್ಲಾ ಪರಿಷತ್ ಸದಸ್ಯರಾದ ಎಚ್. ಎಂ. ಮಾಸ್ತಿ, ಶ್ರೀಮತಿ ಎಚ್. ಎಸ್. ಸುಮಿತ್ರ, ಬಿ. ಜಿ ಚಿದಂಬರ್, ಕಾಂಗ್ರೆಸ್ ಮುಖಂಡ ಯು. ಕೆ. ಶಾಮಣ್ಣ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಬಲಾತ್ಕಾರದ ಸಹಗಮನ

(3ನೇ ಪುಟದಿಂದ)

ಬಗ್ಗೆ ವೈದ್ಯರಲ್ಲಿ ಭಿನ್ನಾಭಿಪ್ರಾಯವಿದೆ. ಡಾ॥ ಮಗನ್ ಸಿಂಗ್ ಪತ್ತೆಯಾದರೆ, ಈ ಪ್ರಕರಣದ ಬಗ್ಗೆ ಬಹಳ ಮುಖ್ಯವಾದ ಸುಳಿವು ಸಿಗಬಹುದೆಂದು ಪೋಲೀಸರ ವಿಶ್ವಾಸ.

ವರದಕ್ಷಿಣೆಯಾಗಿ ತಂದ ವಸ್ತುಗಳ ಮೇಲಿನ ದುರಾಶೆ?

ರೂಪ್ ಕನ್ವರ್ ಮದುವೆಯಲ್ಲಿ ವರದಕ್ಷಿಣೆಯಾಗಿ 440 ಗ್ರಾಂ ಚಿನ್ನ, 30 ಸಾವಿರ ರೂ. ಬ್ಯಾಂಕ್ ಠೇವಣಿ, ಕಲರ್ ಟಿ.ವಿ., ಅಡಿಗೆ ಪಾತ್ರೆಗಳ ಒಂದು ಸೆಟ್ ಮತ್ತು ಒಂದು ರೆಫ್ರಿಜಿರೇಟರ್ — ಇವನ್ನೆಲ್ಲ ಕೊಡಲಾಗಿತ್ತು. ಈಗ ಆಕೆಗೆ ಮಕ್ಕಳಾಗುವ ಮೊದಲೇ ಆಕೆಯ ಗಂಡ ಸತ್ತುದರಿಂದ, ರಜಪೂತ ಸಂಪ್ರದಾಯದ ಪ್ರಕಾರ, ಇವೆಲ್ಲವನ್ನೂ ಆಕೆಯ ತೌರಿಗೆ ಹಿಂದಿರುಗಿಸಬೇಕಾಗುತ್ತಿತ್ತು. 'ಸತಿ' ಘಟನೆಗೆ ಇದೊಂದು ಪ್ರಬಲ ಕಾರಣವಾಗಿರಬಹುದೆಂದು ಪೋಲೀಸರು ತನಿಖಾ ತಂಡಕ್ಕೆ ತಿಳಿಸಿದರು. (ಆಧಾರ : ಇಂಡಿಯನ್ ಎಕ್ಸ್‌ಪ್ರೆಸ್' 21-10-87)

ಶಿವಮೊಗ್ಗ ಅಡಿಕೆ ಧಾರಣೆ

ತಾ॥ 19.10.1987

ಸರಕು : 3300 – 4859

ಬೆಟ್ಟೆ : 2239 – 2810

ಗೊರಬಲು : 810 – 1259

ಸಾಗರ ಅಡಿಕೆ ತಾ॥ 20.10.1987

ಇಡಿ ಅಡಿಕೆ ರೂ. 2019–2282

ಚಾಲಿ ರೂ. 1279–1410

ಸಿಪ್ಪೆ ಗೋಟು ರೂ. 329–620

ಆಪಿ ರೂ. 3869 – 4201

ಮಂಗಳೂರು ಏಲಕ್ಕಿ ಧಾರಣೆ

ದಿನಾಂಕ 20-10-1987

ರೂ. 90 – 105

ಕಾಳು ಮೆಣಸು 5466

ಸಕಲೇಶಪುರ ಏಲಕ್ಕಿ ಧಾರಣೆ

ತಾ। 16-10-1987

ಏಲಕ್ಕಿ ರೂ. 200 ರಿಂದ 210, ಜರಡಿ ರೂ. 180ರಿಂದ 190, ಉತ್ತಮ ರೂ. 150ರಿಂದ 160, ಕೂಳೆ ರೂ. 110ರಿಂದ 120, ಬೀಜ ರೂ. 110ರಿಂದ 115. ಕರಿಮೆಣಸು ರೂ. 55ರಿಂದ 56

ವಿದ್ಯುತ್ ಅವ್ಯವಸ್ಥೆ : ನ. ರಾ. ಪುರದಲ್ಲಿ ಪ್ರತಿಭಟನೆ

ನ. ರಾ ಪುರ : ಬಹುಶಃ ಈ ಊರಿನ ಇತಿಹಾಸದಲ್ಲೇ ಮೊದಲ ಬಾರಿಗೆ ನಾಗರಿಕ ಅವ್ಯವಸ್ಥೆ ಕುರಿತು ಪ್ರತಿಭಟನಾ ಮೆರವಣಿಗೆಯೊಂದು ಅ. 17ರಂದು ನಡೆಯಿತು.

ಅನೇಕ ದಿನಗಳಿಂದ ಈ ಪ್ರದೇಶದಲ್ಲಿ ಸರಿಯಾಗಿ ವಿದ್ಯುತ್ ಪೂರೈಕೆಯಾಗದಿರುವ ಬಗ್ಗೆ ಈ ಪ್ರತಿಭಟನೆ ನಡೆಯಿತು. ನಂತರ ತಹಸೀಲ್ದಾರ್ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು.

ಈ ಪ್ರತಿಭಟನೆಯ ಅಂಗವಾಗಿ ನ. ರಾ. ಪುರ ಬಂದ್‌ಗೆ ಕರೆ ನೀಡಲಾಗಿತ್ತು ಬಹು ದೊಡ್ಡ ಸಂಖ್ಯೆಯಲ್ಲಿ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಅನಂತರ ನಡೆದ ಪ್ರತಿಭಟನಾ ಸಭೆಯಲ್ಲಿ ಸ್ಥಳೀಯ ಧಾರ್ಮಿಕ ಮಾಸ ಪತ್ರಿಕೆ 'ಶ್ರೀ ಸಮಂತಭದ್ರ ವಾಣಿ'ಯ ಸಹ ಸಂಪಾದಕ ಎಂ. ಪಿ. ಜಗತ್ಪಾಲ್ ಮುಂತಾದವರು ಭಾಷಣ ಮಾಡಿದರು.

(ವರದಿ: ಎಸ್.ಎನ್. ಮಹಾಬಲ ರಾವ್)

ಪ್ರಾ. ಶಾಲೆಗಳ ಪುನರಾರಂಭ 30.10.87ರಂದು

ಕೊಪ್ಪ : ಶಾಲೆಗಳಲ್ಲಿ ನವೆಂಬರ್ 1 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಬೇಕಿರುವುದರಿಂದ ಅರ್ಧವಾರ್ಷಿಕ ರಜೆಯ ನಂತರ ಎಲ್ಲಾ ಹಿರಿಯ/ಕಿರಿಯ ಪ್ರಾಥಮಿಕ ಶಾಲೆಗಳನ್ನು 30.10.87ರಂದೇ ಪುನರಾರಂಭಿಸುವಂತೆ ಜಿಲ್ಲಾ ಶಿಕ್ಷಣ ಉಪ ನಿರ್ದೇಶಕರಿಂದ ಆದೇಶ ಬಂದಿರುವುದಾಗಿ ಸಹಾಯಕ ಶಿಕ್ಷಣಾಧಿಕಾರಿ ಎಂ. ಚಂದ್ರ ಚಂದ್ರಶೇಖರಯ್ಯ ತಿಳಿಸಿದ್ದಾರೆ.

ನ. 1 ಭಾನುವಾರವಾಗಿದ್ದಾಗ್ಯೂ ಅಂದು ರಾಜ್ಯೋತ್ಸವವನ್ನು ಆಚರಿಸುವಂತೆ ಸೂಚಿಸಲಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಬರ ಪರಿಹಾರ ಕಾಮಗಾರಿ : ಯುವಜನ ಒಕ್ಕೂಟದ ಪದಾಧಿಕಾರಿಗಳ ಪ್ರವಾಸ

ಚಿಕ್ಕಮಗಳೂರು : ಜಿಲ್ಲಾ ಯುವಜನ ಒಕ್ಕೂಟದ ಅಧ್ಯಕ್ಷ, ಕಾರ್ಯದರ್ಶಿ ಮತ್ತು ಸದಸ್ಯರು ಸಂಚಾಲಕ ಹಿರೇಗದ್ದೆ ದಯಾನಂದ ಅವರ ನೇತೃತ್ವದಲ್ಲಿ ಅ. 11 ರಂದು ಮೂಡಿಗೆರೆಯಿಂದ ಪ್ರವಾಸ ಹೊರಟು, ಜಿಲ್ಲೆಯ ಎಲ್ಲೆಡೆಯ ಯುವಕ ಸಂಘ, ಯುವತಿ ಮಂಡಳಿಗಳು ಬರಪರಿಹಾರದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಹಾಗೂ 'ಕೂಲಿಗಾಗಿ ಕಾಳು' ಯೋಜನೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಅಗತ್ಯವಾದ ಮಾಹಿತಿಯನ್ನು ನೀಡಿದ್ದು, ಅ. 12 ರಂದು ಕೊಪ್ಪ, ನ. ರಾ. ಪುರ ತಾಲ್ಲೂಕಿನ ವಿವಿಧ ಸ್ಥಳಗಳಿಗೆ ಭೇಟಿ ನೀಡಿದರು.

ಸಂಗೀತ ಕಾರ್ಯಕ್ರಮ

ಜಯಪುರ : ಶರನ್ನವರಾತ್ರಿಯ ಪ್ರಯುಕ್ತ ಇಲ್ಲಿನ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಹಿರೇಗದ್ದೆಯ ನಟರಾಜ್‌ರವರಿಂದ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಯಿತು. ಉಡುಪಿಯ ಅನಂತರಾಮ್ ಮೃದಂಗ ನುಡಿಸಿದರು.

ಮಂಗಳೂರು-ನ. ರಾ. ಪುರ ನಡುವೆ 2 ಬಸ್

ನರಸಿಂಹರಾಜಪುರ-ಮಂಗಳೂರು ನಡುವೆ ಪ್ರಯಾಣಿಕರ ಅನುಕೂಲಕ್ಕಾಗಿ 2 ಖಾಸಗಿ ಬಸ್‌ಗಳಿಗೆ ಪರವಾನಗಿ ನೀಡಲು ಪ್ರಾಧಿಕಾರ ಒಪ್ಪಿದೆ ಎಂದು ರಸ್ತೆ ಬಳಕೆದಾರರ ವೇದಿಕೆ ಸಂಚಾಲಕ ಶಂಕರನಾರಾಯಣ ಭಟ್ ತಿಳಿಸಿದ್ದಾರೆ.

ಅ. 15ರಂದು ನಡೆದ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಕುಂದುಕೊರತೆ ಸಭೆಯಲ್ಲಿ ನಾಗರೀಕರು ಮಾಡಿಕೊಂಡ ಮನವಿ ಮೇರೆಗೆ ಈ ಒಪ್ಪಿಗೆ ದೊರೆತಿದೆ.

ವಾಸವಿ ಯುವಜನ ಸಂಘ

ಶೃಂಗೇರಿ : ಇಲ್ಲಿ ಕಳೆದ ತಿಂಗಳು ಆರಂಭಿಸಲಾದ ವಾಸವಿ ಯುವಜನ ಸಂಘದ ಪದಾಧಿಕಾರಿಗಳು : ಗೋವಿಂದರಾಜ್ (ಅಧ್ಯಕ್ಷ), ಶ್ರೀಮತಿ ಸಾವಿತ್ರಿ ಪ್ರಸಾದ್ (ಉಪಾಧ್ಯಕ್ಷೆ), ಬಿ. ಎಸ್. ಗಣೇಶ್ (ಕಾರ್ಯದರ್ಶಿ), ಕು॥ ಕಲ್ಪನ (ಸಹಕಾರ್ಯದರ್ಶಿ), ಎಂ. ಕೆ. ಕುಮಾರ ಸ್ವಾಮಿ ಖಜಾಂಚಿ)